ಸಾವಿರ ಸಾವಿರ ಮಂದಿ ದಯಾನಂದರ ಮಾತುಗಳಿಂದ ಪ್ರಭಾವಿತರಾದರು. ಆದರೆ ಅವರನ್ನು ನಿಂದಿಸಿ, 'ನಾಸ್ತಿಕ, ಧರ್ಮದ್ರೋಹಿ' ಎಂದು ಆಪಾದಿಸುವವರೂ ಬಹಳಷ್ಟು ಜನರಿದ್ದರು. 'ಹಿಂದೂ ವೇಷದಲ್ಲಿ ಅಡಗಿರುವ ಕ್ರಿಶ್ಚಿಯನ್' ಎಂದು ದೂಷಿಸಿದರು. ಅವರ ಮೇಲೆ ವಿಷ ಪ್ರಯೋಗಗಳು ನಡೆದವು, ಪ್ರಾಣಾಂತಿಕ ಹಲ್ಲೆಗಳು ನಡೆದವು. ದಯಾನಂದರು ನಿರ್ಭೀತ ವೀರ ಸನ್ಯಾಸಿ. ತಮ್ಮ ವಿಚಾರಗಳನ್ನು ಸ್ವಲ್ಪವೂ ಅಳುಕದೆ ಸಾರಿ ನಡೆದರು.

'ನಾರಿಯರು ಓದಬಾರದು ಎಂಬ ಅಪಸಿದ್ಧಾಂತ ವೇದ ವಿರುದ್ಧ. ನಾರಿಯರು ವಿದ್ಯಾವತಿಯರಾಗಬಾರದು ಎಂಬುದು ಭಗವಂತನ ಅಭಿಪ್ರಾಯವಾಗಿದ್ದಲ್ಲಿ, ಅವನು ನಾರಿಯರಿಗೆ ಗ್ರಹಣಶಕ್ತಿ ಸಂಪನ್ನವಾದ ಮಸ್ತಿಷ್ಕವನ್ನು ಕೊಡುತ್ತಿರಲಿಲ್ಲ. ಇತ್ತ ಬುದ್ಧಿಯನ್ನು ಉಪಯೋಗಿಸಬಾರದು ಎಂದು ನಾರಿಯರಿಗೆ ಹೇಳುವ ಹಕ್ಕು ಯಾರಿಗಿದೆ' ಎಂದು ಗುಡುಗಿದರು. 'ಪರದೆಯಂತಹ ಹೀನ ಪದ್ಧತಿಯ ಕರಾಳ ಬಂಧನದಲ್ಲಿ ನಾರಿಯರು ಬಿದ್ದಿರುವವರೆಗೆ, ಶಿಕ್ಷಣ, ಸಂಸ್ಕೃತಿ ಎಲ್ಲವೂ ನಾರಿಯರ ಪಾಲಿಗೆ ಕನಸೇ ಆಗಿರುತ್ತದೆ. ಮಹಿಳೆಯರು ಪರದೆಯನ್ನು ಹರಿದೆಸೆಯಬೇಕು' ಎಂದು ಕರೆಕೊಟ್ಟರು.

## ಮೂಲಶಂಕರನಿಂದ ದಯೆಯ ಆನಂದದವರೆಗೆ...

ಇಸವಿ 1824. ಇಂದಿನ ಗುಜರಾತಿನ ಟಂಕಾರಾ ಎಂಬ ಊರಿನಲ್ಲಿ ದಯಾನಂದರು ಸಾಂಪ್ರದಾಯಿಕ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದರು. ತಂದೆ ಕರ್ಷನ್‌ಜೀ ಲಾಲ್ಜೀ ತ್ರಿವೇದಿ. ತಾಯಿ ಅಮೃತಬಾಯಿ. ದಯಾನಂದರು ಹುಟ್ಟಿದಾಗ ಅವರಿಗೆ ಇಟ್ಟ ಹೆಸರು ಮೂಲಶಂಕರ.

ತಂದೆ ಶೈವ ಸಂಪ್ರದಾಯಿಗಳು. ದಯಾನಂದನು ಶಿವಭಕ್ತನಾಗಬೇಕೆಂದು ಅವರ ತಂದೆ ಬಯಸಿದ್ದರು. ದಯಾನಂದನಿಗೆ ಬಾಹ್ಯ ಪೂಜಾ ವಿಧಾನಗಳಲ್ಲಿ ಆಸಕ್ತಿ ಇರಲಿಲ್ಲ. ಅವರು 14 ವರ್ಷದ ಕಿಶೋರನಾಗಿದ್ದ ಸಂದರ್ಭ. ಆ ವರ್ಷದ ಶಿವರಾತ್ರಿಗೆ ತಂದೆ ಉಪವಾಸ ವ್ರತ ಹಿಡಿದು ರಾತ್ರಿ ಜಾಗರಣೆ ಮಾಡಬೇಕೆಂದು ಆಗ್ರಹಿಸಿದರು. ದಯಾನಂದ ತಂದೆಯೊಡನೆ ಇಡೀ ರಾತ್ರಿಯ ಜಾಗರಣೆಗೆ ಶಿವಮಂದಿರಕ್ಕೆ ಬಂದರು. ಮೂರನೆಯ ಜಾವ ಆರಂಭವಾಗುವ ಹೊತ್ತಿಗೆ ಭಕ್ತವೃಂದದಲ್ಲಿ ಬಹುಪಾಲು ಜನ ನಿದ್ರೆಗೆ ವಶರಾಗಿದ್ದರು. ದಯಾನಂದ ಮಾತ್ರ ನಿಶ್ಚಲ ಚಿತ್ತರಾಗಿ ಶಿವಲಿಂಗವನ್ನು ನಿಟ್ಟಿಸುತ್ತಿದ್ದ. 'ಅರೆಕ್ಷಣ ರೆಪ್ಪೆ ಮುಚ್ಚಿದರೂ ವ್ರತಭಂಗವಾಗುತ್ತದೆ, ಶಿವ ಮುನಿಯುತ್ತಾನೆ' ಎಂದು ಹೇಳಿದ್ದ ತಂದೆ ಭರ್ಜರಿ ನಿದ್ರೆಯಲ್ಲಿದ್ದರು. ಪೂಜಾರಿಗಳೂ ಮಲಗಿದ್ದರು! ಈಗ ದಯಾನಂದ ನೋಡುತ್ತಾನೆ, ನಾಲ್ಕಾರು ಇಲಿಗಳು ಶಿವಲಿಂಗದ ಮೇಲೇರಿ ಭಕ್ತರು ಅರ್ಪಿಸಿದ ಪತ್ರ ಪುಷ್ಪಗಳನ್ನೆಲ್ಲಾ ಚೆಲ್ಲಾಡುತ್ತಿವೆ. ನೈವೇದ್ಯವನ್ನು ಉಂಡು ತಣಿದು ಕುಣಿಯುತ್ತಿವೆ.

ಪಕ್ಕದಲ್ಲೇ ಮಲಗಿದ್ದ ತಂದೆಯನ್ನು ಎಬ್ಬಿಸಿ 'ಸರ್ವಶಕ್ತ ಮಹಾದೇವ ಚೇತನ ಸ್ವರೂಪನೇ ಆಗಿರಬೇಕು. ಈ ಕಲ್ಲಿನ ತುಂಡನ್ನು ಪೂಜಿಸುವುದೇತಕ್ಕೆ?' ಎಂದು ಪ್ರಶ್ನಿಸಿದರು. ದಯಾನಂದನಿಗೆ 'ಈ ಕರ್ಮಕಾಂಡದಲ್ಲಿ ಅರ್ಥವಿಲ್ಲ' ಎನಿಸಿತ್ತು.

ದಯಾನಂದರ 16ನೇ ವಯಸ್ಸಿನಲ್ಲಿ, ಅವರ ಹಿರಿಯ ತಂಗಿ ವಾಂತಿಭೇದಿಯಿಂದ ತೀರಿಕೊಂಡಾಗ ಎಳೆ ಮನಸ್ಸಿಗೆ ಆಘಾತ. ಕಾಲರಾ ರೋಗ ದಯಾನಂದರ ಪ್ರೀತಿಪಾತ್ರ ಚಿಕ್ಕಪ್ಪನನ್ನು ಕೊಂಡೊಯ್ದಿತ್ತು. ದಯಾನಂದರ ಎದೆ ಒಡೆದಿತ್ತು. ದಯಾನಂದರು 1846ರಲ್ಲಿ ತೀವ್ರ ವೈರಾಗ್ಯದಲ್ಲಿ, ಮನೆಯ ಮೋಹ ಮಮತೆಗಳನ್ನು ಕಳಚಿಕೊಂಡು ಗೃಹತ್ಯಾಗ ಮಾಡಿ ನಡೆದುಬಿಟ್ಟರು. ಅವರ ಮನಸ್ಸು ಸಿದ್ಧಿ ಪ್ರಾಪ್ತಿಯಾಗಬಲ್ಲ ಗುರುವನ್ನು ಅರಸಿ ಹೊರಟಿತ್ತು. ಗುಡ್ಡ, ಬೆಟ್ಟ, ಕಾಡು, ಮೇಡುಗಳನ್ನು ಸುತ್ತಿದರು. ಹಿಮಾಲಯದ ಉದ್ದಗಲಕ್ಕೆ ಅಲೆದರು. ಈ ಹಾದಿಯಲ್ಲಿ ಅನೇಕ ಸಾಧುಗಳನ್ನು, ಸಿದ್ಧಪುರುಷರನ್ನು ಭೇಟಿಯಾದರು. ಅವರುಗಳಿಗೆ ತಿಳಿದಷ್ಟು ಇವರು ಕಲಿತರು, ತೃಪ್ತಿ ಇರಲಿಲ್ಲ. ಕಡೆಗೆ ವಿರಜಾನಂದ ದಂಡೀಧರಾಧೀಶ್ವರರ ಬಳಿಗೆ ಬಂದರು.

## ಗುರುವಿನ ಸನ್ನಿಧಿಯಲ್ಲಿ...

ಮಥುರಾನಗರದಲ್ಲಿ ನೆಲೆಸಿದ್ದ ದಂಡೀಧರಾಧೀಶ್ವರರು ಅಂಧರು. 18ನೇ ವಯಸ್ಸಿನಲ್ಲಿ ಸನ್ಯಾಸ ದೀಕ್ಷೆ ಪಡೆದವರು. ಅಸಾಧಾರಣ ಸ್ಮರಣಶಕ್ತಿಯ ವಿರಜಾನಂದರು ಪಂಡಿತರಿಂದ ಆಲಿಸಿ ವ್ಯಾಕರಣ ಗ್ರಂಥಗಳನ್ನು ಕಂಠಪಾಠ ಮಾಡಿದ್ದರು. ಸಿದ್ಧಾಂತ ಕೌಮುದಿ, ನ್ಯಾಯ ದರ್ಶನ, ಮೀಮಾಂಸಾದರ್ಶನ, ವೇದಗಳು ಮತ್ತು ಉಪನಿಷತ್ತುಗಳನ್ನು ಕಲಿತಿದ್ದರು. ಶ್ರವಣ, ಯೋಗಾಭ್ಯಾಸ, ಶ್ರುತ ಶಾಸ್ತ್ರಗಳ ಮನನ ಈ ಮಹಾತ್ಮನ ಜೀವನಚರ್ಯೆಯಾಗಿತ್ತು.

1860ರಲ್ಲಿ ದಯಾನಂದರು ಮಥುರಾನಗರಿಯ ಸ್ವಾಮಿ ವಿರಜಾನಂದರ ಬಾಗಿಲಿನಲ್ಲಿ ನಿಂತರು. ಜ್ಞಾನಭಿಕ್ಷೆಯನ್ನು ಬೇಡಿದರು. ಗುರುಗಳ ಅನಂತ ಸೇವೆ ಮಾಡಿದರು. ಅವರಿಂದ ಯೋಗವಿದ್ಯೆ, ವೇದ, ವ್ಯಾಕರಣ, ತರ್ಕಶಾಸ್ತ್ರ ಏನೆಲ್ಲವನ್ನು ಗಾಢವಾಗಿ ಕಲಿತರು. ಈ ಗುರುವು ದಯಾನಂದರಿಗೆ 'ಮಾನವ ಹೃದಯಗಳಲ್ಲಿ ಮತಾಂತರದ ಮಬ್ಬು ಕವಿದಿದೆ. ದೇಶದಲ್ಲಿ ಸ್ವಾರ್ಥದ ಸಂಘರ್ಷ ನಡೆದಿದೆ. ಈ ಘೋರಾಂಧಕಾರದಲ್ಲಿ ವೇದಗಳ ಜ್ಞಾನವನ್ನು ಬೆಳಗು' ಎಂದು ಆಜ್ಞೆ ಮಾಡಿದರು. ಗುರುವಿನ ಆಜ್ಞೆಯನ್ನು ಮತ್ತು ಆಶೀರ್ವಾದವನ್ನು ತಲೆಯಲ್ಲಿ ಹೊತ್ತು ದಯಾನಂದರು ಹೊರಟರು.

## 'ಕಟ್ಟು ಕತೆ'ಗಳ ಖಂಡನೆ

1865ರಲ್ಲಿ ಜಯಪುರಕ್ಕೆ ಬಂದಾಗ, ಶೈವ–ವೈಷ್ಣವ ಸಂಪ್ರದಾಯಗಳ ನಡುವೆ ತಿಕ್ಕಾಟ ನಡೆದಿತ್ತು. ಮಹಾರಾಜಾ ರಾಮಸಿಂಹನ ಒಲವು ಶೈವ ಸಂಪ್ರದಾಯದ ಕಡೆಗಿತ್ತು. ವೈಷ್ಣವ ಪಂಥದ ಗುರುಗಳು ತಮ್ಮ ತಮ್ಮ ದೇವರ ವಿಗ್ರಹಗಳನ್ನು ಎತ್ತಿಕೊಂಡು ಜಯಪುರದಿಂದ ಹೊರಟಿದ್ದರು. ವಾತಾವರಣ ಸಾಕಷ್ಟು ಪ್ರಕ್ಷುಬ್ಧವಾಗಿತ್ತು. ಇಂತಹ ಸಮಯದಲ್ಲಿ ದಯಾನಂದರು ನಿರ್ಭಿಡೆಯಾಗಿ ಮೂರ್ತಿಪೂಜೆಯನ್ನು ಖಂಡಿಸಿದರು. ಪುಷ್ಕರ ಪೂರ್ಣಿಮೋತ್ಸವದ ಸಂದರ್ಭ. ಸಾವಿರಾರು ಜನರ ವಿಶೇಷ ಸಭೆಗಳಲ್ಲಿ ಪರಮಾತ್ಮನು 'ನಿರಾಕಾರ ಸಚ್ಚಿದಾನಂದ ಸ್ವರೂಪನು' ಎಂದು ಸಾರಿದರು.

ಹಿಂದೂ ಮತವಾದಿಗಳನ್ನು ಮಾತ್ರವಲ್ಲ, ಕ್ರೈಸ್ತ ಮುಸಲ್ಮಾನರನ್ನೂ ಧರ್ಮಚರ್ಚೆಗೆ–ಶಾಸ್ತ್ರಾರ್ಥಕ್ಕೆ ಆಹ್ವಾನಿಸಿದರು. ಹಿಂದೂ ಪುರಾಣಗಳನ್ನು ಖಂಡಿಸಿದರು. ಏಸುವಿನ ಪುನರುತ್ಥಾನ, 'ಮಾನವ ಜನ್ಮದಿಂದಲೇ ಪಾಪಿ' ಎಂಬ ಕಲ್ಪನೆಯನ್ನು ಖಂಡಿಸಿದರು. 'ಪ್ರತಿಯೊಂದು ಸಂಪ್ರದಾಯದಲ್ಲಿಯೂ ಇಂತಹ ಕಟ್ಟು ಕತೆಗಳಿವೆ. ಯಾವ ಮತದಲ್ಲಿ ಅವು ಇದ್ದರೂ ಅವು ಬರೀ ಕಟ್ಟು ಕತೆಗಳೇ' ಎಂದರು. ಶೂಲ್‌ಬ್ರೆಡ್ ಮತ್ತು ಗ್ರೇ ಎಂಬ ಪಾದ್ರಿಗಳು 'ಭಾರತದಲ್ಲಿ ಆಂಗ್ಲರ ಆಡಳಿತ ಎಂಬುದನ್ನು ಮರೆಯಬೇಡಿ. ಕ್ರೈಸ್ತ ಮತವನ್ನು ಟೀಕಿಸುತ್ತೀರಿ, ಸೆರೆಮನೆ ಸೇರಬೇಕಾದೀತು' ಎಂದು ಎಚ್ಚರಿಸಿದರು. ದಯಾನಂದರು ನಸುನಕ್ಕರು. 'ಸಖ, ತಮ್ಮ ಗುರುವನ್ನೇ ಶೂಲಕ್ಕೇರಿಸಿದ ಜನರಿಂದ ಇನ್ನೇನನ್ನು ನಿರೀಕ್ಷಿಸಲಾದೀತು? ಸತ್ಯಕ್ಕಾಗಿ ಸೆರೆಮನೆ ಸೇರಿದರೂ, ನಿಮ್ಮ ಅಹಿತವನ್ನು ನಾನು ಕೋರುವುದಿಲ್ಲ. ನಿಮಗೆ ಸನ್ಮತಿ ನೀಡಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ' ಎಂದರು. ದಯಾನಂದರ ಬದುಕಿನುದ್ದದ ರೀತಿ ಇದಾಗಿತ್ತು. ರಾಮ, ಕೃಷ್ಣ, ಯೇಸುವನ್ನು ಮಹಾಪುರುಷರೆಂದು ಗೌರವಿಸುತ್ತಿದ್ದರು. ಆದರೆ ದೇವರೆಂದು ಮೂರ್ತಿಗಳನ್ನು ಮಾಡಿ ಪೂಜಿಸುವುದನ್ನು ವಿರೋಧಿಸುತ್ತಿದ್ದರು.

## ಭಾಗವತ ವ್ಯಾಸಕೃತವಲ್ಲ

ದಯಾನಂದರಂತಹ ತಾರ್ಕಿಕ ಹಾಗೂ ದಾರ್ಶನಿಕ ವಿದ್ವಾಂಸರನ್ನು ಎದುರಿಸುವುದು ಸುಲಭವಿರಲಿಲ್ಲ. ಅವರ ವ್ಯಾಕರಣ ಪ್ರೌಢಿಮೆ ತೀಕ್ಷ್ಣವಿತ್ತು. ಹಾಗೆಂದೇ, ವೇದಗಳನ್ನು ನಂಬುತ್ತಿದ್ದ ದಯಾನಂದರು 18 ಪುರಾಣಗಳನ್ನು ವಿರೋಧಿಸುತ್ತಿದ್ದರು. ದಯಾನಂದರು 'ಭಾಗವತ ವ್ಯಾಸಕೃತವಲ್ಲ. ಅದು ಬೋಪದೇವನೆಂಬ ಪಂಡಿತನ ಕೃತಿ. ಅದರಲ್ಲಿ ವ್ಯಾಕರಣ ದೋಷಗಳು ತುಂಬಿ ಹೋಗಿವೆ' ಎಂದು ಘೋಷಿಸಿದರು.

ಒಮ್ಮೆ ಪಂಜಾಬಿನ ಅಸಿಸ್ಟೆಂಟ್ ಜುಡಿಷಿಯಲ್ ಕಮಿಶನರ್ ಕಾರ್‌ಸ್ಟೀಫನ್ ನಮ್ರವಾಗಿಯೇ ದಯಾನಂದರಲ್ಲಿ ಒಂದು ಪ್ರಶ್ನೆ ಕೇಳಿದನು. 'ಜಾರ ಮತ್ತು ಚೋರನಾಗಿದ್ದ ಕೃಷ್ಣನನ್ನು ಮಹಾತ್ಮ ಎನ್ನಲು ಮನಸ್ಸು ಒಪ್ಪುವುದಿಲ್ಲ' ಎಂದರು. ಆಗ ದಯಾನಂದರು ಹೇಳಿದರು – 'ಸ್ಟೀಫನ್ ಮಹಾಶಯರೇ, ಶ್ರೀಕೃಷ್ಣ ಅತ್ಯಂತ ಪವಿತ್ರನಾದ ಮಹಾಪುರುಷ. 5000 ವರ್ಷಗಳ ಹಿಂದಿದ್ದ ಆತನ ಜೀವನ ಚರಿತ್ರೆ ನಮಗೆ ಮಹಾಭಾರತದಲ್ಲಿ ಸಿಗುತ್ತದೆ. ಆದರೆ ಕೇವಲ 700–800 ವರ್ಷಗಳ ಹಿಂದೆ ಬರೆದ ಭಾಗವತದಲ್ಲಿ ಚಿತ್ರಿತವಾಗಿರುವುದು ಶ್ರೀಕೃಷ್ಣನ ಚರಿತ್ರವಲ್ಲ. ಆ ಗ್ರಂಥ ಬರೆದವರ ಕತೆ ಮಾತ್ರ'.